**4 ನೇ ಅಪರ ಜಿಲ್ಲಾ ಮತ್ತು ಸತ್ರ  ನ್ಯಾಯಾಧೀಶರ ನ್ಯಾಯಾಲಯ, ಮೈಸೂರು.**

**ಎಸ್ ಸಿ ಕೇಸ್ ನಂ. 21/2019**

| | | |
|---|---|---|
| ಸಾಕ್ಷಿದಾರರ ಹೆಸರು | ಜಯಂತ್ | ಫ್ರಾಸಾ –20,   ಚಾಸಾ –10 |
| ತಂದೆಯ ಹೆಸರು | ಕೃಷ್ಣಮೂರ್ತಿ | |
| ವಯಸ್ಸು | 43 ವರ್ಷ | ಪ್ರಮಾಣ ವಚನ ಮಾಡಿದ ದಿನಾಂಕ.03.02.2025 |
| ವೃತ್ತಿ | ಸಿವಿಲ್ ಕನ್ಸ್ಟ್ರಕ್ಷನ್ | |
| ವಾಸ ಸ್ಥಳ | ಜೆ ಪಿ ನಗರ | |

**ಮುಖ್ಯ ವಿಚಾರಣೆ – ಮಾನ್ಯ  ಸರ್ಕಾರಿ ಅಭಿಯೋಜಕ ರಿಂದ:**

ಹೀಗೆ ಅಂದಾಜು 10 ವರ್ಷಗಳ ಹಿಂದೆ 1 ದಿನ ವೇದಾವತಿ ಎಂಬುವವರ ಮನೆಯಲ್ಲಿ ಮಹಜರ್ ಮಾಡಿದ್ದರು. ಆ ಮಹಜರ್ ಕಾಲಕ್ಕೆ ಆ ಮನೆಯಲ್ಲಿದ್ದ ಕೆಲವು ಚೆಕ್ಕುಗಳು ಮತ್ತು ಕೆಲವು ಸ್ಟಾಂಪ್ ಪೇಪರುಗಳನ್ನು ಮತ್ತು ನಗದು ಹಣವನ್ನು ಮಹಜರ್ ಮಾಡಿ ಅಮಾನತ್ತುಪಡಿಸಿಕೊಂಡಿದ್ದರು. ವೇದಾವತಿಯವರು ಅಕ್ರಮವಾಗಿ ಫೈನಾನ್ಸ್ ವ್ಯವಹಾರ  ನಡೆಸುತ್ತಿದ್ದ ಬಗ್ಗೆ ದಾಖಲಾದ ಪ್ರಕರಣದಲ್ಲಿ ಆ ಮಹಜರ್ ಅನ್ನು ಮಾಡಿದ್ದರು. ಆ ಕಾಲಕ್ಕೆ ನನ್ನ ಜೊತೆಗೆ ಬೇರೆ ಯಾರು ಇದ್ದರು, ಅವರ ಹೆಸರು ನೆನಪಿಲ್ಲ.  ತುಂಬಾ ವರ್ಷಗಳು ಆಗಿದ್ದರಿಂದ ಆ ಚೆಕ್ಕನ್ನು ಯಾರು ಯಾರಿಗೆ ಕೊಟ್ಟಿದ್ದರು ಎಂದು ನೆನೆಪಿರುವುದಿಲ್ಲ. ನಗದು ಹಣ ಎಷ್ಟು ಎಂದು ಈಗ ನೆನಪಿಲ್ಲ. ಆ ಕಾಲಕ್ಕೆ ನಾನು ಮಹಜರ್ ಗೆ ಸಹಿ ಹಾಕಿದ್ದೆ. ನಾನು ಈಗ ನೋಡುತ್ತಿರುವ ಮಹಜರ್ ಅದೇ ಇದ್ದು,ಅದರಲ್ಲಿ ನನ್ನ ಸಹಿ

ಇರುತ್ತದೆ. ಸದರಿ ಮಹಜರ್ ಅನ್ನು **ನಿಪಿ–34** ಮತ್ತು ಸಾಕ್ಷಿದಾರರ ಸಹಿಯನ್ನು ನಿಪಿ–**34(ಎ)** ಎಂದು ಗುರುತಿಸಲಾಯಿತು. ಆ ಮಹಜರ್ ಮಾಡಿ ಅಮಾನತ್ತುಪಡಿಸಿಕೊಂಡ ಬಗ್ಗೆ ಹೇಳಿಕೆಯನ್ನು ಕೊಟ್ಟಿದ್ದೇನೆ. ನಾನು ಈಗ ನೋಡುತ್ತಿರುವ ಪೋಟೋಗಳು ಅಮಾನತ್ತು ಮಹಜರ್ ಕಾಲದಲ್ಲಿ ತೆಗೆದ ಪೋಟೋಗಳು ಇರುತ್ತವೆ. ಸದರಿ ಪೋಟೋಗಳನ್ನು ಕ್ರಮವಾಗಿ **ನಿಪಿ–35** ರಿಂದ **ನಿಪಿ–40** ಎಂದು ಗುರುತಿಸಲಾಗಿದೆ.

ನಾನು ಈಗ ನೋಡುತ್ತಿರುವ ದಾಖಲೆಗಳ ಪೈಕಿ ಬೆಳೆ ಧೃಡೀಕರಣ ಪತ್ರ ಮತ್ತು ಇನ್ನುಳಿದ ಎಲ್ಲಾ ದಾಖಲೆಗಳನ್ನು ಆ ದಿನ ಅಮಾನತ್ತುಪಡಿಸಿಕೊಂಡಿದರು ಬಗ್ಗೆ ನೆನಪಿದೆ. ಆ ದಿನ ಬೆಳೆ ಧೃಡೀಕರಣ ಪತ್ರ ಅಮಾನತ್ತುಪಡಿಸಿಕೊಂಡ ಬಗ್ಗೆ ನೆನಪಿಲ್ಲ. ಈಗ ನಾನು ನೋಡುತ್ತಿರುವ **ನಿಪಿ–13 ರಿಂದ ನಿಪಿ–17, ನಿಪಿ–21 ರಿಂದ ನಿಪಿ–23,ನಿಪಿ–26, ನಿಪಿ–28 ಮತ್ತು ನಿಪಿ–29** ಎಂದು ಈಗಾಗಲೇ ಗುರುತಿಸಿರುವ ದಾಖಲೆಗಳು ಮತ್ತು ಇನ್ನುಳಿದ ಈಗ ನನಗೆ ತೋರಿಸುತ್ತಿರುವ ದಾಖಲೆಗಳನ್ನು ಆ ದಿನ ಮಹಜರ್ ಕಾಲಕ್ಕೆ ಅಮಾನತ್ತುಪಡಿಸಿಕೊಂಡಿದ್ದರು. ಸದರಿ ಇನ್ನುಳಿದ ಎಲ್ಲಾ ದಾಖಲೆಗಳನ್ನು **ನಿಪಿ–41** ಎಂದು ಗುರುತಿಸಿದೆ. ಈ ಬಗ್ಗೆ ಹೇಳಿಕೆಯನ್ನು ಸಹ ಕೊಟ್ಟಿದ್ದೆ.

**ಪಾಟೀ ಸವಾಲು – ಆರೋಪಿ ಪರ ಶ್ರಿ ಕೆ ಎಸ್ ಆರ್ ವಕೀಲರಿಂದ :**

ನಾನು ಸಿವಿಲ್ ಕನ್ಸಕ್ಷನ್ ವಾಟರ್ ಫ್ರೂಪ್ ಕೆಲಸ ಮಾಡುತ್ತೇನೆ. ನಾನು ಮೊದಲಿಂದಲೂ ಜೆ ಪಿ ನಗರ ಮೈಸೂರಿನಲ್ಲಿ ವಾಸವಿದ್ದೇನೆ.ಆ ಮಹಜರ್ ಮಾಡಿದ

ದಿನಾಂಕ ನೆನಪಿಲ್ಲ. ಆ ದಿನ ಮದ್ಯಾಹ್ಞ 12.00–2.00 ಗಂಟೆ ಮದ್ಯದಲ್ಲಿ ಮನೆಯಿಂದ ಹೋಗುವಾಗ ಕರೆದುಕೊಂಡು ಹೋಗಿ ಮಹಜರ್ ಮಾಡಿದ್ದಾರೆ. ಆ ಕಾಲಕ್ಕೆ ನಾನು ನನ್ನ ದ್ವಿಚಕ್ರ ವಾಹನದಲ್ಲಿ ಹೋಗುತ್ತಿದ್ದೆ. ಆ ಕಾಲಕ್ಕೆ ಕಾನ್ಸಟೇಬಲ್ ನನ್ನನ್ನು ನಿಲ್ಲಿಸಿ ಮನೆ ಒಳಗೆ ಕರೆದುಕೊಂಡು ಹೋಗಿದ್ದರು ಅಲ್ಲಿ ಇನ್ಸಪೆಕ್ಟರ್ ಇದ್ದರು. ಆ ಕಾಲಕ್ಕೆ ಆ ಮನೆಯಲ್ಲಿ ಮಹಿಳೆ ಮತ್ತು ಅವರ ಗಂಡ, ಇನ್ಸಪೆಕ್ಟರ್ ಮತ್ತು ಇಬ್ಬರು ಹುಡುಗರು ಹಾಜರಿದ್ದರು. ಇಬ್ಬರು ಮಹಿಳಾ ಪೋಲಿಸ್ ಸಿಬ್ಬಂದಿಗಳು ಮತ್ತು ಇಬ್ಬರು ಪುರುಷ ಕಾನ್ಸಟೇಬಲ್ ಗಳು ಹಾಜರಿದ್ದರು. ಆ ಕಾಲಕ್ಕೆ ಒಂದು ಮಹಜರ್ ಮಾಡುವುದಿದೆ ಎಂದು ನನ್ನನ್ನು ಕರೆದಿದ್ದರು.

ಮನೆಯಲ್ಲಿದ್ದ ಮಹಿಳೆ ಅಕ್ರಮವಾಗಿ ಪೈನಾನ್ಸ ವ್ಯವಹಾರ ಮಾಡುವ ಕಾರಣ ಮಹಜರ್ ಮಾಡಿದ್ದೇವೆ ಎಂದು ಹೇಳಿದರು. ಬೇರೆ ಮಾಹಿತಿ ಕೊಟ್ಟಿರಲಿಲ್ಲ. ನಾನು ಹೋದಾಗ ಮನೆಯಲ್ಲಿ ಪೊಲಿಸರು ಇದ್ದರು. ಅವರು ವಿಚಾರಣೆ ಮಾಡುತ್ತಿದ್ದರು. ಆ ಮನೆಯಲ್ಲಿ ವಾಸವಿರುವ ಮಹಿಳೆ ಸರ್ಕಾರಿ ಶಾಲೆಯಲ್ಲಿ ಶಿಕ್ಷಕಿಯಾಗಿ ಕೆಲಸ ಮಾಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸಾಮಾನ್ಯವಾಗಿ ಶಿಕ್ಷಕರ ಮನೆಯಲ್ಲಿ ವಿದ್ಯಾರ್ಥಿಗಳ ಉತ್ತರ ಪತ್ರಿಕೆಗಳು ಇರುತ್ತವೆ ಎಂದರೆ ನನಗೆ ಗೊತ್ತಿಲ್ಲ. ಪೋಲಿಸರು ಮನೆಯಲ್ಲಿದ್ದ ಬೀರು, ಕಪೋರ್ಡ ಮತ್ತು ಟೇಬಲ್ ಗಳನ್ನು ತಪಾಸಣೆ ಮಾಡಿದರು. ಆ ಕಾಲಕ್ಕೆ ಇನ್ಸಪೆಕ್ಟರ್ ಆ ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನಿಪಿ–35 ರಿಂದ ನಿಪಿ–40 ಪೋಟೋಗಳಲ್ಲಿ ಇನ್ಸಪೆಕ್ಟರ್ ಕಾಣುತ್ತಿಲ್ಲ ಎಂದರೆ ಇರಬಹುದು. ಆ ಕಾಲಕ್ಕೆ ಅ ಮಹಿಳೆಯಿಂದಲೇ ಬೀರುವಿನ ಕೀಯನ್ನು ಪಡೆದಿದ್ದರು. ಆದಿನ ಎಲ್ಲಾ ದಾಖಲೆಗಳನ್ನು ನನಗೆ ತೋರಿಸಿ

ಅಮಾನತ್ತುಪಡಿಸಿಕೊಂಡಿದ್ದರು. ಆ ದಾಖಲೆಗಳಲ್ಲಿ ಯಾವುದು ಯಾರಿಗೆ ಸೇರಿದ್ದು ಎಂದು ಹೇಳಲು ಆಗುವುದಿಲ್ಲ. ಆ ದಿನ ಒಟ್ಟು ಎಷ್ಟು ಚೆಕ್ಕುಗಳು ಮತ್ತು ಎಷ್ಟು ಸ್ಟಾಂಪುಗಳು ಮತ್ತು ಎಷ್ಟು ನೊಂದಾಯಿತ ದಾಖಲೆಗಳನ್ನು ಅಮಾನತ್ತುಪಡಿಸಿಕೊಂಡಿದ್ದರು ಎಂದು ಹೇಳಲು ಆಗುವುದಿಲ್ಲ.

ಆ ದಾಖಲೆಗಳಲ್ಲಿ ನಕಲು ಪ್ರತಿಗಳು ಸಹ ಇದ್ದವು. ಆ ದಿನ ನನ್ನ ಸಮಕ್ಷಮ ಯಾವುದೇ ಮಹಜರ್ ಮಾಡಿಲ್ಲ ಮತ್ತು ದಾಖಲೆಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಆ ದಾಖಲೆಗಳಲ್ಲಿ ನಮೂದಿರುವ ದಿನಾಂಕ ಗೊತ್ತಿಲ್ಲ. ನಿಪಿ–25 ದಿನಾಂಕ 14.05.2017 ದ ದಾಖಲೆ ಎಂದರೆ ನನಗೆ ಗೊತ್ತಿಲ್ಲ. ಆ ದಿನ ನಾನು ಸವಿತರವರಿಗೆ ಸಂಬಂಧಿಸಿದ ಬೆಳೆ ಧೃಡೀಕರಣ ಪತ್ರವನ್ನು ನೋಡಿಲ್ಲ. ಆ ದಿನ ಆ ದಾಖಲೆಗಳಲ್ಲಿ ಯಾವ ದಾಖಲೆ ಯಾರಿಗೆ ಸಂಬಂಧಪಟ್ಟಿದ್ದು ಎಂದು ನನಗೆ ತೋರಿಸಿಲ್ಲ. ಆ ಕಾಲಕ್ಕೆ ಪವಿತ್ರ ಎನ್ನುವವರಿಗೆ ಸಂಬಂದಪಟ್ಟ ಯಾವ ದಾಖಲೆಗಳು ಅಲ್ಲಿ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಆ ದಿನ ಈಗ ನನಗೆ ತೋರಿಸುತ್ತಿರುವ ಪತ್ರಗಳನ್ನು ನೋಡಿದ್ದೇನೆ ಸದರಿ ಪತ್ರಗಳನ್ನು **ನಿಪಿ–41(ಎ) ಯಿಂದ ನಿಪಿ–41(ಡಿ)** ಎಂದು ಗುರುತಿಸಿದೆ. ಆ ದಿನ ನನಗೆ ಯಾವುದೇ ದಾಖಲೆಗಳನ್ನು ತೋರಿಸದೆ ನನ್ನ ಸಹಿಯನ್ನು ಮಾತ್ರ ಪಡೆದಿದ್ದಾರೆ ಎಂದರೆ ಸರಿಯಲ್ಲ.ಆ ದಿನ ಆ ಮನೆಯಲ್ಲಿ ಯಾವುದೇ ದಾಖಲೆಗಳನ್ನಲು ಅಮಾನತ್ತಉಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಠಾಣೆಯಲ್ಲಿಯೇ ನನ್ನ ಸಹಿ ಪಡೆದಿದ್ದಾರೆ ಎಂದರೆ ಸರಿಯಲ್ಲ. ಆ ದಿನ ಮದ್ಯಾಹ್ನ 2.30–3.00 ಗಂಟೆವರೆಗೆ ಆ ಸ್ಥಳದಲ್ಲಿ ಇದ್ದೆ. ಬೆಳಿಗ್ಗೆ

10.30–11.30 ರ ವೇಳೆಯಲ್ಲಿ ನಾನು ಆ ಸ್ಥಳಕ್ಕೆ ಹೋಗಿದ್ದೆ. ನಾನು ಆ ಸ್ಥಳಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ. ಆ ದಿನ ಜಪ್ತಿ ಮಾಡಿದ ಹಣ ಎಷ್ಟಿತ್ತು ಎಂದು ಮೊತ್ತ ಗೊತ್ತಿಲ್ಲ. ಆ ದಿನ ನನ್ನ ಸಮಕ್ಷಮ ಬೇರೆ ಯಾವುದೇ ದಾಖಲೆಗಳನ್ನು ಅಥವಾ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ. ಮಹಜರ್ ಕಾಲಕ್ಕೆ ಆ ಮಹಿಳೆ ಏನನ್ನೊ ಕುಡಿಯಲು ಪ್ರಯತ್ನ ಮಾಡಿದ್ದರಿಂದ ಪೋಲಿಸರು ಅವರನ್ನು ಮನೆಯಿಂದ ಆಚೆ ಕರೆದುಕೊಂಡು ಹೋಗಿದ್ದರು, ಆದರೆ ಎಲ್ಲಿಗೆ ಕರೆದುಕೊಂಡು ಹೋಗಿದ್ದರು ಎಂದು ನನಗೆ ಗೊತ್ತಿಲ್ಲ ಮತ್ತು ನಂತರ ವಾಪಸ್ಸು ಎಷ್ಟು ಗಂಟೆಗೆ ಬಂದರು ಎಂದು ನನಗೆ ಸಮಯ ಗೊತ್ತಿಲ್ಲ. ಮಹಜರ್ ಮುಗಿದ ಬಳಿಕ ಆ ಮಹಿಳೆ ಆ ರೀತಿ ಏನನ್ನೋ ಕುಡಿದಿದ್ದರು.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು )

ಓ ಹೇ ಕೇ ಸ ಇ ಎ ಒ

4 ನೇ ಅಪರ ಜಿಲ್ಲಾ ಮತ್ತು
ಸತ್ರ ನ್ಯಾಯಾಧೀಶರು, ಮೈಸೂರು.